# ಆಡಳಿತ ತರಬೇತಿ ಸಂಸ್ಥೆಯ ಆವರಣ ಮತ್ತು ವಿದ್ಯಾನಗರ ಬಡಾವಣೆಯಲ್ಲಿರುವ ಸಂಸ್ಥೆಯ ವಸತಿ ಗೃಹಗಳ ಹಂಚಿಕೆ ಮತ್ತು ಸೂಕ್ತ ನಿರ್ವಹಣೆ ಸಂಬಂಧ ನಡೆದ ಸಭೆಯ ನಡವಳಿ

ಆಡಳಿತ ತರಬೇತಿ ಸಂಸ್ಥೆಯ ಆವರಣದಲ್ಲಿರುವ ಮತ್ತು ವಿದ್ಯಾನಗರ ಬಡಾವಣೆಯಲ್ಲಿರುವ ಸಂಸ್ಥೆಯ ವಸತಿ ಗೃಹಗಳ ಹಚಿಚಿಕೆ ಮತ್ತು ಸೂಕ್ತ ನಿರ್ವಹಣೆ ಸಂಬಂಧವಾಗಿ ದಿನಾಂಕ:19.11.2014 ರ ಬೆಳಿಗ್ಗೆ 11.00 ಗಂಟೆಗೆ ಮಹಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆಯನ್ನು ತುಂಗಭದ್ರ ಹಾಲ್ ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಗೆ ಈ ಕೆಳಕಂಡ ಅಧಿಕಾರಿಗಳು ಹಾಜರಾಗಿದ್ದರು.

1. ಶ್ರೀ ಕೆ.ಆರ್. ಸುಂದರ್ ಜಂಟಿ ನಿರ್ದೇಶಕರು (ಆಡಳಿತ), ಆತಸಂ ಮೈಸೂರು
2. ಶ್ರೀ ಪಿ.ಶಿವಶಂಕರ್, ನಿರ್ದೇಶಕರು, ಎಸ್.ಐ.ಆರ್.ಡಿ, ಮೈಸೂರು.
3. ಶ್ರೀ ವೆಂಕಟೇಶ್ ಕಡಗದಕೈ, ನಿರ್ದೇಶಕರು, ಎಸ್.ಐ.ಯು.ಡಿ, ಮೈಸೂರು,
4. ಶ್ರೀ ನಾಗರಾಜ, ಉಪನಿರ್ದೇಶಕರು(ಆ & ಶಿ) ಮತ್ತು ಬೋಧಕರು(ಜಿತಸಂ), ಆ.ತ.ಸಂ, ಮೈಸೂರು
5. ಶ್ರೀ ಜಿ.ಆರ್.ಸುರೇಶ, ಸ.ಕಾ.ಅಭಿಯಂತರರು, ಆತಸಂ., ಮೈಸೂರು
6. ಶ್ರೀ ಎಸ್.ಆಸೀಫ್ ಆಲಿ ಖಾನ್, ಸ.ಕಾ.ಅಭಿಯಂತರರು ಎಸ್.ಐ.ಆರ್.ಡಿ, ಮೈಸೂರು
7. ಶ್ರೀ ಸೈಯದಾ ಅಂಜಿದಾ ಪರ್ವಿನ್, ಬೋಧಕರು, ವಾರ್ಡನ್(ಪ್ರ), ಎಸ್.ಐ.ಆರ್.ಡಿ, ಮೈಸೂರು

ಸದರಿ ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಕುರಿತು ಅಜೆಂಡಾದಂತೆ ಚರ್ಚಿಸಲಾಯಿತು.

**ಅಜೆಂಡಾ-1:** ಸಂಸ್ಥೆಯ ಆವರಣ ಮತ್ತು ವಿದ್ಯಾನಗರದಲ್ಲಿರುವ ಸಂಸ್ಥೆಯ ವಸತಿ ಗೃಹಗಳ ಹಂಚಿಕೆ ಮತ್ತು ಸೂಕ್ತ ನಿರ್ವಹಣೆಗಾಗಿ ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡಂತೆ " ವಸತಿ ಗೃಹಗಳ ನಿರ್ವಹಣಾ ಸಮಿತಿ" ಯನ್ನು ರಚಿಸಲು ತೀರ್ಮಾನಿಸಲಾಯಿತು.

- ಮಹಾನಿರ್ದೇಶಕರು, ಆ.ತ.ಸಂ, ಮೈಸೂರು : ಅಧ್ಯಕ್ಷರು
- ನಿರ್ದೇಶಕರು, ಎಸ್.ಐ.ಆರ್.ಡಿ, ಮೈಸೂರು : ಸದಸ್ಯರು
- ನಿರ್ದೇಶಕರು, ಎಸ್.ಐ.ಯು.ಡಿ, ಮೈಸೂರು : ಸದಸ್ಯರು
- ಜಂಟಿ ನಿರ್ದೇಶಕರು (ಆಡಳಿತ), ಆ.ತ.ಸಂ, ಮೈಸೂರು : ಸದಸ್ಯ ಕಾರ್ಯದರ್ಶಿ

**ಅಜೆಂಡಾ-2:** ಸಂಸ್ಥೆಯ ಆವರಣದಲ್ಲಿ ನಿರ್ಮಾಣದ ಹಂತದಲ್ಲಿರುವ ವಸತಿ ಗೃಹಗಳ ವಸ್ತು ಸ್ಥಿತಿಯ ಬಗ್ಗೆ ಚರ್ಚಿಸಲಾಯಿತು. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದ ಅನುಮೋದಿತ ಮೂಲ ಅಂದಾಜು ಪಟ್ಟಿಯನ್ನು ಮತ್ತು ನಕ್ಷೆಯನ್ನು ಕೆ.ಆರ್.ಐ.ಡಿ.ಎಲ್, ಮೈಸೂರು ಇವರಿಂದ ಪಡೆಯುವಂತೆ ಸೂಚಿಸಲಾಯಿತು. ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ವಸತಿ ಗೃಹಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪರಿವೀಕ್ಷಣಾ ವರದಿಯನ್ನು ನೀಡಲು ಸೂಚಿಸಲಾಯಿತು. ಕೆ.ಆರ್.ಐ.ಡಿ.ಎಲ್ ರವರು ಕರಾರಿನ ಅವಧಿಯಲ್ಲಿ ಕಾಮಗಾರಿಯನ್ನು ಮುಗಿಸದಿರುವುದರಿಂದ, ಸಂಸ್ಥೆಯಿಂದ ಈಗಾಗಲೇ ನೀಡಿರುವ ಸಂಪೂರ್ಣ ಹಣಕ್ಕೆ ಬಡ್ಡಿಯನ್ನು ವಸೂಲಿ ಮಾಡಲು ತೀರ್ಮಾನಿಸಲಾಯಿತು. ಇದರ ಬಗ್ಗೆ ಆ.ತ.ಸಂ.ನ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕೂಡಲೇ ಮಾಹಿತಿಯೊಂದಿಗೆ ಕಡತ ಸಲ್ಲಿಸಲು ಸೂಚಿಸಲಾಯಿತು. ಕೆ.ಆರ್.ಐ.ಡಿ.ಎಲ್, ಮೈಸೂರು ಇವರ ವತಿಯಿಂದ ಸಂಸ್ಥೆಯ ಆವರಣದಲ್ಲಿ ಕೈಗೊಳ್ಳಲಾಗುತ್ತಿರುವ ಆಡಿಟೋರಿಯಂ ಕಟ್ಟಡ, ಅಧಿಕಾರಿಗಳ ವಸತಿ ಗೃಹಗಳು, 'ಡಿ' ಗ್ರೂಪ್ ವಸತಿ ಗೃಹಗಳು ಮತ್ತು ಇತರೆ ಕಾಮಗಾರಿಗಳ ಕುರಿತು 3rd Party Inspection ನಡೆಸುವ ಸಂಬಂಧ ಕಡತ ಸಲ್ಲಿಸಲು ಸೂಚಿಸಲಾಯಿತು.

**ಅಜೆಂಡಾ–3:** ಸಂಸ್ಥೆಯ ಆವರಣದ ಮತ್ತು ವಿದ್ಯಾನಗರ ಬಡಾವಣೆಯಲ್ಲಿರುವ ಸಂಸ್ಥೆಯ ವಸತಿ ಗೃಹಗಳನ್ನು ಆ.ತ.ಸಂ, ರಾ.ನ.ಸಂ, ಅ.ನ.ಸಾ.ರಾ.ಗ್ರಾ.ಸಂ, ಮತ್ತು ಮೈಸೂರು ಜಿ.ತ.ಸಂ,ಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆಯವರಿಗೆ ನೀಡಲಾಗಿದ್ದ ಪಕ್ಷದಲ್ಲಿ ಅವರುಗಳನ್ನು ನಿಯಮಾನುಸಾರ ವಸತಿ ಗೃಹಗಳಿಂದ ತೆರವುಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

**ಅಜೆಂಡಾ–4:** ಸಂಸ್ಥೆಯ ಆವರಣ ಮತ್ತು ವಿದ್ಯಾನಗರ ಬಡಾವಣೆಯಲ್ಲಿರುವ ಸಂಸ್ಥೆಯ ವಸತಿ ಗೃಹಗಳ ಬಾಡಿಗೆ ಪಾವತಿ ಕುರಿತು ಚರ್ಚಿಸಲಾಯಿತು. ವಸತಿ ಗೃಹಗಳಲ್ಲಿ ವಾಸವಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬಾಡಿಗೆ ಪಾವತಿಸಿರುವ ಕುರಿತು ವಿವರವಾದ ಪಟ್ಟಿಯನ್ನು ತಯಾರಿಸಲು ಮತ್ತು ಪಾವತಿ ಮಾಡದೇ ಬಾಕಿ ಉಳಿಸಿಕೊಂಡಿರುವವರ ವಿವರವನ್ನು ಸಹ ತಯಾರಿಸಲು ಸೂಚಿಸಲಾಯಿತು. ಬಾಡಿಗೆ ಬಾಬ್ತನ್ನು ಸಂಬಂಧಿಸಿದವರ ಸಂಬಳದಿಂದ ಪ್ರತಿ ತಿಂಗಳು ತಪ್ಪದೇ ನಿಯಮಾನುಸಾರ ಹೆಚ್.ಆರ್.ಎ ಗೆ ತಕ್ಕಂತೆ ಕಟಾಯಿಸುವಂತೆ ನಿರ್ಧರಿಸಲಾಯಿತು.

**ಅಜೆಂಡಾ–5 & 6:** ನಿರ್ದೇಶಕರು, ಅ.ನ.ಸಾ.ರಾ.ಗ್ರಾ.ಸಂ, ಮೈಸೂರು ಇವರು ವಸತಿ ಗೃಹಗಳ ವಸ್ತು ಸ್ಥಿತಿ ಕುರಿತು ಪರಿಶೀಲನೆ ಮಾಡಿ ಸಂಸ್ಥೆಗೆ ನೀಡಿರುವ ವರದಿಯನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ಇದರ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲಾಯಿತು. ವರದಿಯಲ್ಲಿರುವ ಪ್ರತಿ ಅಂಶದ ಬಗ್ಗೆ ತೆಗೆದುಕೊಂಡಿರುವ ಕ್ರಮ ಮತ್ತು ಅನುಪಾಲನಾ ವರದಿಯನ್ನು ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು. ಆಗೆಯೇ ನಿಯಮಾನುಸಾರ ಅವರುಗಳ ಹುದ್ದೆಯ ಅರ್ಹತೆಗೆ ಅನುಗುಣವಾಗಿ ನಿರ್ದಿಷ್ಟ ವಸತಿ ಗೃಹಗಳನ್ನು ಹಂಚಿಕೆ ಮಾಡಲು ನಿರ್ಧರಿಸಲಾಯಿತು. ಒಂದು ವೇಳೆ ಹುದ್ದೆಯ ಅರ್ಹತೆಗೆ ವ್ಯತಿರಿಕ್ತವಾಗಿ ವಸತಿ ಗೃಹವನ್ನು ಹಂಚಿಕೆ ಮಾಡಿದ್ದ ಪಕ್ಷದಲ್ಲಿ, ಸಂಬಂಧಿಸಿದ ಅಧಿಕಾರಿ/ಸಿಬಂದಿಯನ್ನು ವಸತಿ ಗೃಹಗಳಿಂದ ಕೂಡಲೇ ತೆರವುಗೊಳಿಸಿ ಅವರ ಹುದ್ದೆಯ ಅರ್ಹತೆಗೆ ತಕ್ಕಂತೆ ವಸತಿ ಗೃಹವನ್ನು ಮರು ಹಂಚಿಕೆ ಮಾಡುವ ಸಂಬಂಧ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**ಅಜೆಂಡಾ–7:** ಸಂಸ್ಥೆಯ ವಸತಿ ಗೃಹಗಳಲ್ಲಿ ವಾಸವಿರುವ ಕೆಲವು ಅಧಿಕಾರಿಗಳು ಮತ್ತು ಸಿಬಂದಿಗಳು ವರ್ಗಾವಣೆ/ನಿವೃತ್ತಿ ಆಗಿದ್ದರೂ ಸಹ ವಸತಿ ಗೃಹವನ್ನು ನಿಗಧಿತ ಅವಧಿಯಲ್ಲಿ ತೆರವುಗೊಳಿಸದೇ ಇರುವುದು ಕಂಡುಬಂದಿರುತ್ತದೆ. ಈ ರೀತಿ ಸರ್ಕಾರದ ಕಾನೂನನ್ನು ಉಲ್ಲಂಘಿಸಿ, ನಿಯಮಬಾಹಿರವಾಗಿ ವಾಸ್ತವ್ಯ ಹೂಡಿರುವ ಅಧಿಕಾರಿ/ಸಿಬ್ಬಂದಿಯನ್ನು ಕೂಡಲೇ ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು ಮತ್ತು ಬಾಡಿಗೆ ಬಾಬ್ತು ಏನಾದರೂ ಬಾಕಿ ಇದ್ದಲ್ಲಿ ಅದನ್ನು ಸಂಬಂಧಿಸಿದವರಿಂದ ವಸೂಲು ಮಾಡಲು ಸೂಚಿಸಲಾಯಿತು.

**ಅಜೆಂಡಾ–8:** ಸಂಸ್ಥೆಯ ವಸತಿ ಗೃಹಗಳಲ್ಲಿ ವಾಸವಿರುವ ಅಧಿಕಾರಿ/ಸಿಬ್ಬಂದಿಗಳು ನೀರಿನ ಬಿಲ್ಲನ್ನು ಪಾವತಿಸದಿರುವುದು ಕಂಡುಬಂದಿರುತ್ತದೆ. ನೀರಿನ ಬಿಲ್ಲಿನ ವೆಚ್ಚವನ್ನು ಯಾವ ರೀತಿ ಭರಿಸಲು ಕ್ರಮ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಸ.ಕಾ.ಅ ರವರಿಗೆ ತಿಳಿಸಲಾಯಿತು.

**ಅಜೆಂಡಾ–9:** ಸಂಸ್ಥೆಯ ಆವರಣ ಮತ್ತು ವಿದ್ಯಾನಗರ ಬಡಾವಣೆಯಲ್ಲಿರುವ ಸಂಸ್ಥೆಯ ವಸತಿ ಗೃಹಗಳನ್ನು ಹಂಚಿಕೆ ಮಾಡುವಂತೆ ಕೋರಿ ಅಧಿಕಾರಿಗಳು / ಸಿಬ್ಬಂದಿಗಳು ಸಲ್ಲಿಸಿರುವ ಮನವಿ ಪತ್ರಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಸಲ್ಲಿಸುವ ಅರ್ಜಿಯ ಮಾದರಿಯಲ್ಲಿ ಅರ್ಜಿಗಳನ್ನು ಪಡೆದು ಪಟ್ಟಿ ಮಾಡಿ ಮುಂದಿನ " ವಸತಿ ಗೃಹಗಳ ನಿರ್ವಹಣಾ ಸಮಿತಿ" ಸಭೆಯ ಗಮನಕ್ಕೆ ತರಲು ಸೂಚಿಸಲಾಯಿತು. ಲೋಕೋಪಯೋಗಿ ಇಲಾಖೆಯ ಮಾದರಿಯಲ್ಲಿ Quarters Inventory ಯನ್ನು ತೆರೆಯಲು ತೀರ್ಮಾನಿಸಲಾಯಿತು.

**ಅಜೆಂಡಾ–10:** ಸಂಸ್ಥೆಯ ಆವರಣಲ್ಲಿ ಈಗಾಗಲೇ ನಿರ್ಮಾಣದ ಹಂತದಲ್ಲಿರುವ ಎರಡು 'ಡಿ' ಗ್ರೂಪ್ ವಸತಿ ಗೃಹಗಳ ಕಾಮಗಾರಿಯು ಯಾವಾಗ ಪೂರ್ಣಗೊಳಿಸಬೇಕಿತ್ತು ಎಂಬುದನ್ನು ಪರಿಶೀಲಿಸಿ, ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದು. ವಿದ್ಯಾನಗರದ ವಸತಿಗೃಹಗಳಗೆ ಸಂಬಂಧಿಸಿದಂತೆ, ವಸತಿ ಗೃಹಗಳ ಆವರಣದಲ್ಲಿ ಎರಡು ಗೇಟ್‌ಗಳು ಇದ್ದು, ಇದರಲ್ಲಿ ಒಂದು ಗೇಟ್ ಅನ್ನು Lock ಮಾಡುವ ಬಗ್ಗೆ ಪರಿಶೀಲಿಸಲು ಸ.ಕಾ.ಅ ರವರಿಗೆ ತಿಳಿಸಲಾಯಿತು. ಆಡಳಿತ ತರಬೇತಿ ಸಂಸ್ಥೆಯಲ್ಲಿ 'ಡಿ' ಗ್ರೂಪ್ ನೌಕರರ ಅವಶ್ಯಕತೆ ಹೆಚ್ಚಿಗೆ ಇರುವುದರಿಂದ ಆ.ತ.ಸಂ. ಆವರಣದಲ್ಲಿನ ವಸತಿ ಗೃಹಗಳಲ್ಲಿರುವ ಎಸ್.ಐ.ಆರ್.ಡಿ ಮತ್ತು ಎಸ್.ಐ.ಯು.ಡಿ ಸಂಸ್ಥೆಗಳಿಗೆ ಸಂಬಂಧಿಸಿದ 'ಡಿ' ಗ್ರೂಪ್ ನೌಕರರನ್ನು ಸಂಸ್ಥೆಯ ಆವರಣದ ವಸತಿ ಗೃಹಗಳಿಂದ ಕೂಡಲೇ ವಿದ್ಯಾನಗರ ವಸತಿ ಗೃಹಗಳಿಗೆ ಸ್ಥಳಾಂತರಿಸಲು ತೀರ್ಮಾನಿಸಲಾಯಿತು.

**ಅಜೆಂಡಾ–11:** ಮುಂದಿನ " ವಸತಿ ಗೃಹಗಳ ನಿರ್ವಹಣಾ ಸಮಿತಿ" ಯ ಸಭೆಯಲ್ಲಿ ಸೂಕ್ತ ರೀತಿಯಲ್ಲಿ ವಸತಿ ಗೃಹಗಳನ್ನು ಹಂಚಿಕೆ ಮಾಡುವ ಸಂಬಂಧ ಈಗಾಗಲೇ ಖಾಲಿ ಇರುವ ಎಲ್ಲಾ ವಸತಿ ಗೃಹಗಳ ವಿವರವನ್ನು, ವಸತಿ ಗೃಹಗಳ ವಿಸ್ತೀರ್ಣವು ಒಳಗೊಂಡಂತೆ ಪಟ್ಟಿ ಮಾಡಲು ಸ.ಕಾ.ಅ ರವರಿಗೆ ಸೂಚಿಸಲಾಯಿತು. ಖಾಲಿ ಇರುವ ಎಲ್ಲಾ ವಸತಿ ಗೃಹಗಳಿಗೆ ಸರಿಯಾಗಿ ಬೀಗ ಹಾಕಿ, ಬೀಗದ ಕೀಗಳನ್ನು ಜಂಟಿ ನಿರ್ದೇಶಕರು(ಆಡಳಿತ) ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಜಂಟಿಯಾಗಿ ತಮ್ಮ ವಶದಲ್ಲಿ ಇಟ್ಟುಕೊಳ್ಳುವಂತೆ ಅಭಿಪ್ರಾಯಪಡಲಾಯಿತು.

**ಅಜೆಂಡಾ–12:** ಮೈಸೂರು ನಗರ ಪಾಲಿಕೆಗೆ Property Tax ಕಟ್ಟುವ ಬಗ್ಗೆ ಪರಿಶೀಲಿಸಲು ಸ.ಕಾ.ಅ ರವರಿಗೆ ಸೂಚಿಸಲಾಯಿತು.

ಜಂಟಿ ನಿರ್ದೇಶಕರು (ಆಡಳಿತ) ಮಹಾ ನಿರ್ದೇಶಕರು